ದಿನಾಂಕಃ01-07-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು
**ಪಾಟೀ ಸವಾಲು ಃ ಪ್ರತಿವಾದಿ ಪರ ವಕೀಲರಿಂದಃ-**

ದಾವಾ ಸ.ನಂ.2 ರ 1 ಎಕರೆ 35 ಗುಂಟೆ ಇ. ತಿಮ್ಮಾಪುರ ಗ್ರಾಮಕ್ಕೆ ಸೇರಿದೆ. ಸದರಿ ಸ್ವತ್ತು ನನ್ನ ಅಜ್ಜನಿಗೆ ದರಖಾಸ್ತು ಮೂಲಕ ಬಂದಿದೆ. ನನ್ನ ಅಜ್ಜ ಎಂದರೆ ನನ್ನ ತಂದೆಯ ತಂದೆಯಾದ ರುದ್ರಪ್ಪ ಆಗಿರುತ್ತಾರೆ. ಅವರು ಮೂಲತಃ ಚೌಳಹಿರಿಯೂರಿನವರು. ಪ್ರತಿವಾದಿಯರಿಗೆ ಸೇರಿದ ಸ್ವತ್ತಿನ ಸ.ನಂ.1/2 ಆಗಿರುತ್ತದೆ. ದಾವಾಸ್ವತ್ತನ್ನು ಭೂ ಮಾಪನ ಇಲಾಖೆಯವರು ದುರಸ್ತು ಮಾಡಿರುತ್ತಾರೆ. ಯಾವ ವರ್ಷದಲ್ಲಿ ದುರಸ್ತು ಆಗಿರಬಹುದು ಎಂದು ನನಗೆ ಗೊತ್ತಿಲ್ಲ. ದುರಸ್ತಾದ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಪ್ರತಿವಾದಿಯರ ದಕ್ಷಿಣಕ್ಕೆ ನಮಗೆ ಸೇರಿದ ಸ್ವತ್ತು ಇದೆ. ಪ್ರತಿವಾದಿಯರಿಗೆ ಸೇರಿದ ಸ್ವತ್ತು ದುರಸ್ತು ಅಗಿರುವ ಕುರಿತು ನನಗೆ ಗೊತ್ತಿಲ್ಲ. ಪ್ರತಿವಾದಿಯರ ಸ್ವತ್ತು ಜಂಟಿ ಖಾತೆಯಲ್ಲಿದೆ. ಪ್ರತಿವಾದಿಯರ ಜಮೀನಿನಲ್ಲಿ ನೂರಾರು ವರ್ಷಗಳ ಹುಣಿಸೇ ಮರಗಳು ಇವೆ ಎಂದರೆ ಸರಿಯಲ್ಲ. ನಮ್ಮ ಜಮೀನನ್ನು ಅಳತೆ ಮಾಡಿಸಲು ನನ್ನ ತಾಯಿ ಅರ್ಜಿ ನೀಡಿರುತ್ತಾರೆ. ಅಳತೆ ಕಾಲಕ್ಕೆ ಬಾಜೂದಾರರಿಗೆ ನೋಟೀಸನ್ನು ನೀಡಿದ್ದರು.

ನಿಪಿ-5 ರಂತೆ ಮಹಾಲಿಂಗಪ್ಪನವರಿಗೆ ನೋಟೀಸನ್ನು ನೀಡಿಲ್ಲ ಎಂದರೆ ಸಾಕ್ಷಿ ಅವರ ಕುಟುಂಬದವರಿಗೆ ನೀಡಿರುತ್ತಾರೆ ಎಂದು ಹೇಳುತ್ತಾರೆ. ನಿಪಿ-5 ಕ್ಕೆ ಮಹಾಲಿಂಗಪ್ಪನವರ ಮೊಮ್ಮಗಳಾದ ಚೈತ್ರ ಸಹಿ ಮಾಡಿರುತ್ತಾಳೆ. ಸದರಿ ಚೈತ್ರ ಮಹಲಿಂಗಪ್ಪನವರ ಅಣ್ಣನ ಮಗಳ ಮಗಳು. ನಮ್ಮ ಜಮೀನಿನ ಉತ್ತರದ ಆಜೂಬಾಜುದಾರರಿಗೆ ನೋಟೀಸನ್ನು ನೀಡಿರುತ್ತಾರೆ. ಮಹಲಿಂಗಪ್ಪನವರಿಗೆ ನೋಟೀಸು ಜಾರಿಯಾಗದ ಕಾರಣ ಹಾಜರಾಗಿಲ್ಲ ಎಂದರೆ ಸರಿಯಲ್ಲ. ನಿಪಿ-6 ಮತ್ತು 7 ರಂತೆ ಯಾವುದೇ ಮಹಜರು ಮಾಡಿಲ್ಲ ಮತ್ತು ಅಳತೆ ಕಾರ್ಯ ಮಾಡಿಲ್ಲ ಎಂದರೆ ಸರಿಯಲ್ಲ. ಮಹಲಿಂಗಪ್ಪನವರಿಗೆ ಸ.ನಂ.1 ರಲ್ಲಿ 2 ಎಕರೆ 20 ಗುಂಟೆ ಬಂದಿರುತ್ತದೆ. ದಾವಾ ಸರ್ವೆ ನಂಬರು ಮೂಲತಃ ಸರ್ಕಾರಕ್ಕೆ ಸೇರಿದ ಗುಣೆತೋಪು ಜಮೀನು ಎಂದರೆ ಸರಿಯಲ್ಲ. ನನ್ನ ಅಜ್ಜನಿಗೆ ಮಂಜೂರು ಮಾಡುವ ಪೂರ್ವದಲ್ಲಿ ಅಳತೆ ಮಾಡದೇ ಕೇವಲ ದಾಖಲಾತಿಯಂತೆ ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಹುಣಿಸೇಮರದ ಫಸಲನ್ನು ಪ್ರತಿವಾದಿ ತೆಗೆದುಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**
**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

(ರಘುರಾಮ. ಎನ್.ಎಸ್.)
1 ನೇಃಹೆಃ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.